129 (1254); ಶ್ರೀ ಕೃಷ್ಣಾರೆಡ್ಡಿ ಎಂ.

ಅ) ಚಿಂತಾಮಣಿ ನಗರ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಆ) ರಾಜಕಾಲುವೆಗಳ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಒತ್ತುವರಿ ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಎಷ್ಟು ರಾಜಕಾಲುವೆಗಳನ್ನು ಯಾವ ಪ್ರಮಾಣದಲ್ಲಿ ಒತ್ತುವರಿ ಮಾಡಿಕೊಳ್ಳಲಾಗಿದೆ; (ಪೂರ್ಣ ಮಾಹಿತಿ ಒದಗಿಸುವುದು)

ಇ) ಕಳೆದ ಎರಡು ವರ್ಷಗಳಿಂದೀಚೆಗೆ ಎಷ್ಟು ಒತ್ತುವರಿಯಾದಂತಹ ರಾಜಕಾಲುವೆಗಳನ್ನು ವಶಪಡಿಸಿಕೊಳ್ಳಲಾಗಿದೆ; ವಶಪಡಿಸಿಕೊಳ್ಳದಿದ್ದಲ್ಲಿ ಕಾರಣಗಳೇನು;

ಈ) (ಪಾಲಿಕೆಯಲ್ಲಿ) ಎಲ್ಲಾ ರಾಜಕಾಲುವೆಗಳ ನಕ್ಷೆಯು ಲಭ್ಯವಿದೆಯೇ; ಹಾಗಿಲ್ಲದಿದ್ದಲ್ಲಿ, ನಕ್ಷೆಯನ್ನು ತಯಾರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಒತ್ತುವರಿ ಮಾಡಿಕೊಂಡಿರುವ ರಾಜಕಾಲುವೆಗಳನ್ನು ತೆರವುಗೊಳಿಸಲು ಈವರೆವಿಗೆ ಎಷ್ಟು ನೋಟಿಸ್‌ಗಳನ್ನು ನೀಡಲಾಗಿದೆ? (ವಿವರ ನೀಡುವುದು)

ಶ್ರೀ ಖಮರುಲ್ ಇಸ್ಲಾಂ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)

ಅ) ಚಿಂತಾಮಣಿ ನಗರ ವ್ಯಾಪ್ತಿಯಲ್ಲಿ ಒಟ್ಟು 6 ರಾಜಕಾಲುವೆಗಳಿದ್ದು ಸಂಬಂಧಪಟ್ಟ ವಿವರಗಳನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.

ಆ) ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿರುವ ರಾಜ ಕಾಲುವೆಗಳ ಸರ್ವೆ ಮಾಡಿ ಹದ್ದುಬಸ್ತು ಗುರ್ತಿಸಿ ವರದಿ ನೀಡಲು ತಹಸೀಲ್ದಾರ್,

ಚಿಂತಾಮಣಿ ಇವರಿಗೆ ಸೂಚಿಸಲಾಗಿದ್ದು, ಸರ್ವೆ ಮುಗಿದ ನಂತರ ಒತ್ತುವರಿಯಾದ ಜಾಗೆಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗಿದೆ.

ಇ) ಯಾವುದೂ ಇರುವುದಿಲ್ಲ. ತಹಶೀಲ್ದಾರ್ ಇವರಿಂದ ವರದಿ ಬಂದ ನಂತರ ಕ್ರಮವಹಿಸಲಾಗುವುದು.

ಈ) ತಾಲ್ಲೂಕು ಕಛೇರಿಯಲ್ಲಿ ಎಲ್ಲಾ ನಕ್ಷೆಗಳು ಲಭ್ಯವಿರುತ್ತದೆ. ನಗರಸಭೆಯ ಮಾಹಿತಿಗಾಗಿ ಸದರಿ ನಕ್ಷೆಗಳನ್ನು ಪಡೆದುಕೊಳ್ಳಲಾಗುತ್ತದೆ.

ಉ) ರಾಜಕಾಲುವೆ ಒತ್ತುವರಿಗೆ ಸಂಬಂಧಿಸಿದಂತೆ 32 ವ್ಯಕ್ತಿಗಳಿಗೆ ನೋಟೀಸ್ ಜಾರಿ ಮಾಡಿದ್ದು, ತಹಶೀಲ್ದಾರ್ ಇವರಿಂದ ವರದಿ ಬಂದ ನಂತರ ಒತ್ತುವರಿದಾರರನ್ನು ತೆರವುಗೊಳಿಸಲು ಸೂಕ್ತ ಕ್ರಮ ವಹಿಸಲಾಗುವುದು. ಆ ಸಂಬಂಧದ ವಿವರಗಳನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ.

ಅನುಬಂಧ–1

ಕ್ರ.ಸಂ	ರಾಜ ಕಾಲುವೆಗಳ ವಿವರ	ರಾಜಕಾಲುವೆಗಳ ವಿಸ್ತೀರ್ಣ	ಅಭಿವೃದ್ಧಿ ಪಡಿಸಿರುವ ವಿವರ
1	ಆಶ್ರಯ ಬಡಾವಣೆ ವಾರ್ಡ್ ನಂ 2 ರಿಂದ ವಾರ್ಡ್ ನಂ 1 ರ ವೆಂಕಟಗಿರಿಕೋಟೆ ಮೂಲಕ 31ನೇ ವಾರ್ಡ್ ತಿಮ್ಮಸಂದ್ರದಲ್ಲಿ ಹಾದು ಹೋಗಿ ನಕ್ಕುಂದಿಕೆರೆ ಸೇರುತ್ತದೆ.	ಉದ್ದ 1.32 ಕಿ.ಮೀ.	1) 1110.00 ಮೀ. ಉದ್ದದ ಚರಂಡಿಯನ್ನು ನಗರೋತ್ಥಾನ 2 ರ ಯೋಜನೆಯಡಿಯಲ್ಲಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. 2) 200.00 ಮೀ. ಉದ್ದದ ಚರಂಡಿಯನ್ನು 13ನೇ ಹಣಕಾಸು ಯೋಜನೆಯಡಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
2	ವಾರ್ಡ್ ನಂ 4,3,25 ರಲ್ಲಿ ಹಾದು ಹೋಗುವ ರಾಜಕಾಲುವೆ	ಉದ್ದ 3.564 ಕಿ.ಮೀ.	855.00 ಮೀ. ಉದ್ದದ ಚರಂಡಿ ಕಲಸ ಮುಕ್ತಾಯವಾಗಿರುತ್ತದೆ.
3	ವಾರ್ಡ್ ನಂ 7, 8 ರಲ್ಲಿ ಹಾದು ಹೋಗಿ ಮಾಳವಲ್ಲಿ ಕೆರೆ ಸೇರುತ್ತದೆ.	ಉದ್ದ 3.30 ಕಿ.ಮೀ.	600.00 ಮೀ. ಉದ್ದದ ಚರಂಡಿ ಕಲಸ ಮುಕ್ತಾಯವಾಗಿರುತ್ತದೆ.
4	ವಾರ್ಡ್ ನಂ 8 ರಲ್ಲಿ ಬಿಟ್ಟಿದ ತಪ್ಪಲಿನಿಂದ ಕನ್ನಂಬಲ್ಲಿ ಸ್ಮಶಾನದಲ್ಲಿ ಹಾದು ಹೋಗಿ ಮಾಳವಲ್ಲಿ ಕೆರೆಗೆ ಸೇರುತ್ತದೆ.	ಉದ್ದ 2.31 ಕಿ.ಮೀ.	380.00 ಮೀ. ಉದ್ದದ ಚರಂಡಿ ಕಲಸ ಮುಕ್ತಾಯವಾಗಿರುತ್ತದೆ.
5	ವಾರ್ಡ್ ನಂ 10 ರಿಂದ ಹಾದು ಹೋಗಿ ಕೋಲಾರ್ ಕ್ರಾಸ್ ಮುಖಾಂತರ ಗೋವಸಂದ್ರ ಕೆರೆ ಸೇರುತ್ತದೆ.	ಉದ್ದ 6.757 ಕಿ.ಮೀ.	1) 396.45 ಮೀ. ಉದ್ದದ ಚರಂಡಿ ಕಲಸ ಮುಕ್ತಾಯವಾಗಿರುತ್ತದೆ. 2) 375.00 ಮೀ. ಉದ್ದದ ಚರಂಡಿಯನ್ನು ನಗರೋತ್ಥಾನ 2 ರ ಯೋಜನೆಯಡಿಯಲ್ಲಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
6	ವಾರ್ಡ್ ನಂ 19 ಬಂಬೂಬಜಾರ್ ನಿಂದ ರಾಮಕುಂಟೆವರೆಗೆ.	ಉದ್ದ 1.749 ಕಿ.ಮೀ.	1) 330.60 ಮೀ. ಉದ್ದದ ಚರಂಡಿ ಕಲಸ ಮುಕ್ತಾಯವಾಗಿರುತ್ತದೆ. 2) 150.00 ಮೀ. ಉದ್ದದ ಚರಂಡಿಯನ್ನು ನಗರೋತ್ಥಾನ 2 ರ ಯೋಜನೆಯಡಿಯಲ್ಲಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
		ಒಟ್ಟು ಉದ್ದ 19.00 ಕಿ.ಮೀ.	ನಿರ್ವಹಿಸಿರುವ ಮಳೆ ನೀರು ಚರಂಡಿ ಕಾಮಗಾರಿಯ ಉದ್ದ 2562.05 ಮೀ.
			ಪ್ರಗತಿಯಲ್ಲಿರುವ ಮಾಡಬೇಕಾಗಿರುವ ಮಳೆ ನೀರು ಚರಂಡಿ ಕಾಮಗಾರಿಗಳ ಉದ್ದ 1835.00 ಮೀ.

ಅನುಬಂಧ-02

ರಾಜ ಕಾಲುವೆ ಒತ್ತುವರಿ ಮಾಡಿಕೊಂಡಿರುವವರಿಗೆ ನೋಟೀಸ್ ನೀಡಿರುವ ವಿವರದ ಪಟ್ಟಿ

(ಯಜ್ಞವಲ್ಕ್ಯ ರಸ್ತೆ ಮತ್ತು ಕಾಳಿಕಾಂಬ ದೇವಸ್ಥಾನದ ರಸ್ತೆ)

ಕ್ರಮ ಸಂಖ್ಯೆ	ಖಾತೆ ಸಂಖ್ಯೆ	ಹೆಸರು
1	3816/3572	ವೈವಾನ್ ಪ್ರಕಾಶ್
2	3817/3572/1	ಎ.ರಾಮಯ್ಯ
3	3818/3573	ಪಾರ್ವತಮ್ಮ ಕೋಂ ನಂಜಪ್ಪಂಡಪ್ಪ
4	3819/3574	ಎಂ.ಕೃಷ್ಣಯ್ಯ ಶೆಟ್ಟಿ
5	3820/3575	ವನಜಾ ಕೋಂ ಪಿ.ವಿ.ವೆಂಕಟೇಶ್
6	3821/3576	ಬಿ.ಎ.ಶ್ರೀನಾಥ್ ಮತ್ತು ಬಿ.ಎ.ಸತೀಶ್
7	3822/3577	ಎ.ನಾಗರಾಜು ಬಿನ್ ಆದಿನಾರಾಯಣಯ್ಯ
8	3823/3578	ಕೆ.ಎ.ರವಿ ಬಿನ್ ಲೇಟ್. ಆದಿನಾರಾಯಣಯ್ಯ
9	3824/3578/1	ಪಿ.ಶಾರದ ಕೋಂ ಪಿ.ಆರ್.ಕೃಷ್ಣಮೂರ್ತಿ
10	3825/3579	ಎಸ್.ವಿ ಮುರಳಿಧರ್ ಬಿನ್ ವರದರಾಜ ಶೆಟ್ಟಿ
11	3826/3580	ಬಿ.ಎಸ್. ವೆಂಕಟೇಶ್ ಗುಪ್ತ ರಮೇಶ್ ಕುಮಾರ್
12	3827/3581	ಅಧ್ಯಕ್ಷರು, ಯೋಗಿ ಯಜ್ಞವಲ್ಕ ಸೇವಾ ಸಮಿತಿ
13	2834/2680	ಕಾಳಿಕಾಂಬ ದೇವಸ್ಥಾನ
14	2832/2678	ಕಾಳಿಕಾಂಬ ದೇವಸ್ಥಾನ
15	2829/1, 2675/1	ಲಕ್ಷ್ಮಿನಾರಾಯಣಮ್ಮ ಕೋಂ ಪಿ.ಗೋವಿಂದಶೆಟ್ಟಿ
16	2830/2676	ಆರ್.ನಾಗೇಂದ್ರ ಪ್ರಸಾದ್ ಬಿನ್ ಕೆ.ರಘುನಾಥರಾವ್
17	2829/2675	ಪಿ.ಗೋವಿಂದಶೆಟ್ಟಿ
18	2828/2674	ಎಂ.ವೆಂಕಟರಾಯಪ್ಪ
19	2827/2673	ರಘುನಾಥರಾವ್
20	2825/2672	ಎನ್.ನರಸಿಂಹಮೂರ್ತಿ ಭಟ್ಟ ಬಿನ್ ನಾರಾಯಣ ಭಟ್
21	2824/3/2671/3	ಲಕ್ಷ್ಮಿದೇವಮ್ಮ ಕೋಂ ಶಿವಶಂಕರರೆಡ್ಡಿ
22	2824/2/2671/2	ಟಿ.ವಿ.ಸರೋಜಮ್ಮ ಕೋಂ ಭೈರವ್ವ
23	2824/1-2671/1	ಕೆ.ಎಂ ಚೌಡಪ್ಪಿ ಬಿನ್ ಮುನಿಸ್ವಾಮಿ
24	2835/2681	ಎಸ್.ಶ್ರೀನಾಥರೆಡ್ಡಿ ಬಿನ್ ಸುಬ್ಬರಾಯಪ್ಪ
25	2836/2682	ಎಸ್.ಶ್ರೀನಾಥರೆಡ್ಡಿ ಬಿನ್ ಸುಬ್ಬರಾಯಪ್ಪ
26	5933/5505	ಆರ್.ವಿ ಸರಸ್ವತಿ ಕೋಂ ಟಿ.ಶ್ರೀರಾಮಯ್ಯ
27	6327/5894	ಸಿ.ಗಿರಿಜಮ್ಮ ಕೋಂ ಆರ್.ಆಶ್ವತ್ಥನಾರಾಯಣ
28	6330/5896	ವಿ.ಲಕ್ಷ್ಮಿ ಕೋಂ ವಿ.ಸುಬ್ಬರಾಜು
29	6334/5899	ಬೈರರೆಡ್ಡಿ ಬಿನ್ ವೆಂಕಟರಾಮಪ್ಪ
30	5621/5206	ಅಚ್ಯುತ್ ರಾವ್ ಬಿನ್ ಬಿ.ಸೀತಾರಾಂ ಉಪಾಧ್ಯಾಯ
31	2842/2688	ಜೆ.ಲಕ್ಷ್ಮಣರಾವ್
32	2842/1 2688/1	ಎಲ್.ಮೋಹನ್ ಕುಮಾರ್ ಬಿನ್ ಜೆ.ಲಕ್ಷ್ಮಣರಾವ್

ಶ್ರೀ ಕೃಷ್ಣಾರೆಡ್ಡಿ ಎಂ.:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ರಾಜಕಾಲುವೆಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಒತ್ತುವರಿ ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅವರು ಉತ್ತರದಲ್ಲಿ, ತಾಲ್ಲೂಕು ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಸರ್ವೆ ಮಾಡಿ, ಹದ್ದುಬಸ್ತು ಗುರ್ತಿಸಿ ವರದಿ ನೀಡಲು ತಹಶೀಲ್ದಾರ್, ಚಿಂತಾಮಣಿರವರಿಗೆ ಪತ್ರ ಬರೆಯಲಾಗಿದ್ದು, ಸರ್ವೆ ಮಾಡಿ ಒತ್ತುವರಿಯಾಗಿರುವ ಪ್ರದೇಶದ ವರದಿಯನ್ನು ನೀಡಿದ ನಂತರ ಜಂಟಿಯಾಗಿ ತಾಲ್ಲೂಕು ಕಚೇರಿ ಮತ್ತು ನಗರಸಭೆಯಿಂದ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳುತ್ತಾರೆ. ಕಳೆದ ವರ್ಷ ಜುಲೈನಲ್ಲಿ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೇನೆ. ಆಗಲೂ ಸಹ ಇದೇ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು:– ಈಗ ಏನಾಗಬೇಕೆಂದು ಹೇಳಿ?

ಶ್ರೀ ಕೃಷ್ಣಾರೆಡ್ಡಿ ಎಂ.:– ಆಗಲೂ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಈಗಲೂ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲ ಅಧಿವೇಶನಗಳಲ್ಲಿ ಇದೇ ಉತ್ತರವನ್ನು ಕೊಟ್ಟುಕೊಂಡು ಹೋದರೆ ನಾವು ಇದನ್ನೇ ಕೇಳಿಕೊಂಡು ಹೋಗಬೇಕೇ?

ಶ್ರೀ ಸಿ.ಟಿ. ರವಿ:– ಕಳೆದ ಅಧಿವೇಶನದಲ್ಲೂ 'ಒತ್ತುವರಿ ಖುಲ್ಲಾ ಮಾಡಿಸುತ್ತೇವೆ' ಎಂದು ಉತ್ತರ ಕೊಟ್ಟಿದ್ದಾರೆ. ಈಗಲೂ ಅದೇ ಉತ್ತರ ಕೊಟ್ಟಿದ್ದಾರೆ. ಖುಲ್ಲಾ ಮಾಡಿಸಿಲ್ಲ ಎನ್ನುವುದು ಅವರ ಪ್ರಶ್ನೆಯಾಗಿದೆ.

ಅಧ್ಯಕ್ಷರು:– ಅದನ್ನು ಅವರು ಕೇಳಬೇಕಲ್ಲವೇ? ಹೋದ ವರ್ಷವೂ ಇದನ್ನೇ ಹೇಳಿದ್ದರು. ಇದುವರೆಗೂ ಏಕೆ ಖುಲ್ಲಾ ಪಡಿಸಿಲ್ಲ ಎಂದು ಕೇಳಬೇಕಲ್ಲವೇ?

ಶ್ರೀ ಕೃಷ್ಣಾರೆಡ್ಡಿ ಎಂ.:– ಅದನ್ನೇ ನಾನು ಕೇಳುತ್ತಿರುವುದು.

ಅಧ್ಯಕ್ಷರು:– ಕೇಳಿ ಇಲ್ಲಿ, ಹಾಗಲ್ಲ ಪ್ರಶ್ನೆ ಕೇಳುವುದು. ಹೋದ ವರ್ಷ ಕೇಳಿದ್ದೆ, ಇದೇ ರೀತಿ ಉತ್ತರ ಹೇಳಿದ್ದರು, ಇದುವರೆಗೆ ಏಕೆ ಖುಲ್ಲಾ ಪಡಿಸಿಲ್ಲ ಎಂದು ಕೇಳಲು ಬರುವುದಿಲ್ಲವೇ?

ಶ್ರೀ ಕೃಷ್ಣಾರೆಡ್ಡಿ ಎಂ.:– ಅದನ್ನೇ ಕೇಳುತ್ತಿದ್ದೇನೆ. ಏಕೆ ಕ್ರಮ ತೆಗೆದುಕೊಂಡಿಲ್ಲ? ಎಂದು ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು:– ನೀವು youngster ಇದ್ದೀರಿ. ಹೇಗೆ ಪ್ರಶ್ನೆಯನ್ನು ಕೇಳಬೇಕೆಂದರೆ, Question ಹಾಕಿದರೆ ಮಂತ್ರಿಗಳು ತಡಬಡಾಯಿಸಿ ಬಿಡಬೇಕು. ನೀವು ಉತ್ತರ ಹೇಳಿ.

ಶ್ರೀ ಖಮರುಲ್ ಇಸ್ಲಾಂ:– ಮಾನ್ಯ ಅಧ್ಯಕ್ಷರೆ, ನಾನು ಆದೇಶವನ್ನು ಕೊಟ್ಟಿದ್ದೇನೆ. ಲಗೂನೆ ಕೆಲಸ ಮಾಡಲು ಪರಿಶೀಲಿಸುತ್ತೇನೆ.

ಶ್ರೀ ಸಿ.ಟಿ. ರವಿ:– 'ಲಗೂ' ಎಂದರೆ ಬಹಳ ಹಗುರವಾಗಿ ಎಂದು ಅರ್ಥ.

ಅಧ್ಯಕ್ಷರು:– ಮಾನ್ಯ ಮಂತ್ರಿಗಳೇ ಕೇಳಿ.

ಶ್ರೀ ಬಿ.ಎನ್. ವಿಜಯಕುಮಾರ್:– ಇವರ ಉತ್ತರ ಕೇಳಿ ಸದಸ್ಯರು ತಡಬಡಾಯಿಸಿ ಬಿಟ್ಟಿದ್ದಾರೆ.

ಶ್ರೀ ಸಿ.ಟಿ. ರವಿ:– ಸರ್ಕಾರಕ್ಕೆ ಕಿವಿ, ಕಣ್ಣು ಇಲ್ಲ ಎಂದು ನಾವು ಸುಮ್ಮಸುಮ್ಮನೆ ಹೇಳುತ್ತೇವೆಯೇ? ಸರ್ಕಾರಕ್ಕೆ ಕಿವಿ, ಕಣ್ಣು ಇಲ್ಲ ಎಂದು ನಾವು ಸುಮ್ಮಸುಮ್ಮನೆ ಆರೋಪ ಮಾಡುವುದಿಲ್ಲ.

ಶ್ರೀ ಖಮರುಲ್ ಇಸ್ಲಾಂ:– ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು:– ಸುನೋ ಭಾಯ್, ಕಳೆದ ವರ್ಷ ಇದೇ ಪ್ರಶ್ನೆಯನ್ನು ಕೇಳಿದ್ದೆ, ಆಗಲೂ ಇದೇ ಉತ್ತರವನ್ನು ಹೇಳಿದ್ದರು. ಇದುವರೆಗೂ ಏಕೆ ಖುಲ್ಲಾ ಪಡಿಸಿಲ್ಲ ಎಂದು ಕೇಳುತ್ತಿದ್ದಾರೆ.

ಶ್ರೀ ಖಮರುಲ್ ಇಸ್ಲಾಂ:– ನಾನು ಲಗೂ ಕೆಲಸ ಮಾಡಲು ಪರಿಶೀಲಿಸುತ್ತೇನೆ. ಜಲ್ದಿ ಕಾಮ್ ಕರ್‌ನೇಕೆಲಿಯೇ ಪರಿಶೀಲಿಸುತ್ತೇನೆ.

ಅಧ್ಯಕ್ಷರು:– ಅಭಿತಕ್ ಕ್ಯೂ ನಹೀ ಹುವಾ?

ಶ್ರೀ ಖಮರುಲ್ ಇಸ್ಲಾಂ:– ಅದನ್ನೇ ಹೇಳುತ್ತಿದ್ದೇನೆ. ನಾವು ಆದೇಶವನ್ನು ಕೊಡುತ್ತೇವೆ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ನೀವು ಹೇಳಿದ್ದು ಅವರಿಗೆ ಅರ್ಥವಾಗಲಿಲ್ಲ.

SRI QUMAR UL ISLAM:- I will see that it will be done as early as possible ಎಂದು ತಮ್ಮ ಮುಖಾಂತರ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಅಧ್ಯಕ್ಷರು:– I am telling you, this is not correct. Last year he put the same question you gave same answer. From the last one year no action has been taken to evict them. It gives wrong message. You take a serious note and see that. . .

SRI QUMAR UL ISLAM:- Sir I have written to the Deputy Commissioner to take immediate action. ಅಲ್ಲಿ ಇಂಜಿನಿಯರ್ ಇಲ್ಲ, ಮತ್ತೊಂದು ಇಲ್ಲ ಎಂದು ಹೇಳಿದ್ದಾರೆ. Twice I have written. I will see that it will be done as early as possible.

ಅಧ್ಯಕ್ಷರು:– ಒಂದು ತಿಂಗಳೊಳಗೆ ಕೆಲಸ ಮಾಡಿ report ಅವರಿಗೆ ತಿಳಿಸುವಂತೆ ಸೂಚನೆ ಕೊಡಿ.

ಶ್ರೀ ಕೃಷ್ಣಾರೆಡ್ಡಿ ಎಂ.:– ಮೂರನೆಯ ಪ್ರಶ್ನೆಯಲ್ಲಿ, ಕಳೆದ ಎರಡು ವರ್ಷಗಳಿಂದೀಚೆಗೆ ಎಷ್ಟು ಒತ್ತುವರಿಯಾದಂತಹ ರಾಜಕಾಲುವೆಗಳನ್ನು ವಶಪಡಿಸಿಕೊಳ್ಳಲಾಗಿದೆ? ಎಂದು ಕೇಳಿದ್ದೇನೆ. ಅದಕ್ಕೆ ಅವರು ಉತ್ತರದಲ್ಲಿ ಯಾವುದೂ ಇರುವುದಿಲ್ಲ ಎಂದು ಹೇಳಿದ್ದಾರೆ. ಯಾವುದೂ ಇರುವುದಿಲ್ಲ

ಎಂದರೆ ಯಾವುದೂ ಒತ್ತುವರಿಯಾಗಿಲ್ಲ ಎಂದು ಅರ್ಥವೇ ಅಥವಾ ಒತ್ತುವರಿಯಾಗಿರುವುದನ್ನು ವಶಪಡಿಸಿಕೊಂಡಿಲ್ಲ ಎಂದು ಅರ್ಥವೇ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಒತ್ತುವರಿಯಾಗದೇ ಇದ್ದರೆ, ಬಿಡಿಸುವುದು ಯಾವುದನ್ನು?

ಅಧ್ಯಕ್ಷರು:– ಕೇಳುವುದನ್ನು ಸರಿಯಾಗಿ ಕೇಳಿ, ಏನೇನು ಮಾತನಾಡುತ್ತೀರಿ ನೀವು? ಎರಡು ವರ್ಷಗಳಿಂದೀಚೆಗೆ ಯಾವುದು ಒತ್ತುವರಿಯಾಗಿದೆ ಎಂದು ಕೇಳಿದ್ದೀರಿ, ಯಾವುದೂ ಇಲ್ಲ ಎಂದು ಹೇಳಿದ್ದಾರೆ. ಹೌದಲ್ಲವೇ?

ಶ್ರೀ ಕೃಷ್ಣಾರೆಡ್ಡಿ ಎಂ.:– ಒತ್ತುವರಿಯಾಗಿದೆ. ಅದಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ನೋಟೀಸ್ ಜಾರಿ ಮಾಡಿದ್ದಾರೆ.

ಅಧ್ಯಕ್ಷರು:– ನಾನು ಹೇಳುವುದನ್ನು ಪೂರ್ತಿ ಕೇಳಿ. ನಿಮ್ಮ ಪ್ರಕಾರ ಎರಡು ವರ್ಷದಿಂದೀಚೆಗೆ ಯಾವುದಾದರೂ ಒತ್ತುವರಿಯಾಗಿದ್ದರೆ ಅದನ್ನು point out ಮಾಡಿ ಕೇಳಿ.

ಶ್ರೀ ಕೃಷ್ಣಾರೆಡ್ಡಿ ಎಂ.:– ಅನುಬಂಧ–2ರಲ್ಲಿ ಒತ್ತುವರಿ ಮಾಡಿಕೊಂಡಿರುವಂಥ 32 ಜನರಿಗೆ ನೋಟೀಸನ್ನು ಜಾರಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಯಾವುದೂ ಒತ್ತುವರಿ ಮಾಡಿಕೊಂಡಿಲ್ಲ ಎಂದು ಒಂದು ಕಡೆ ಹೇಳುತ್ತಾರೆ. ಅನುಬಂಧ–2ರಲ್ಲಿ 32 ಜನರಿಗೆ ನೋಟೀಸ್ ಕೊಟಿದ್ದೇವೆ ಎಂದೂ ಹೇಳುತ್ತಾರೆ. ಇದರಲ್ಲಿ ಯಾವುದು ಸರಿ?

Dr. QUMAR UL ISLAM:- There were six Main storm water drains. Total length is 19 kms in the city. Out of which 3.2 Km has been completed. 1.2 km is under progress. ಉಳಿದುದಕ್ಕೆ ನೋಟೀಸ್ ಕೊಟ್ಟಿದ್ದೇವೆ. ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ, ಕ್ರಮ ತೆಗೆದುಕೊಂಡ ಮೇಲೆ ಕೆಲಸ ಆಗುತ್ತದೆ. This much assurance I will give to this House.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ಎರಡನೇ ಪೇಜಿನಲ್ಲಿ ನೋಡಿ. ಕಳೆದ ಎರಡು ವರ್ಷಗಳಿಂದೀಚೆಗೆ ಎಷ್ಟು ಒತ್ತುವರಿಯಾದಂತಹ ರಾಜಕಾಲುವೆಗಳನ್ನು ವಶಪಡಿಸಿಕೊಳ್ಳಲಾಗಿದೆ? ಎನ್ನುವ ಪ್ರಶ್ನೆಗೆ 'ಯಾವುದೂ ಇರುವುದಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ತಹಶೀಲ್ದಾರ್‌ರವರಿಂದ ವರದಿ ಬಂದ ನಂತರ ಕ್ರಮ ವಹಿಸಲಾಗುವುದು ಎಂದು ಹೇಳಿದ್ದಾರೆ. ಒಂದು ಕಡೆ ಯಾವುದೂ ಇಲ್ಲ ಎಂದು ಹೇಳುತ್ತಾರೆ, ಇನ್ನೊಂದು ಕಡೆ ವರದಿ ಬರಬೇಕು ಎಂದು ಹೇಳುತ್ತಾರೆ.

ಶ್ರೀ ಕೃಷ್ಣಾರೆಡ್ಡಿ ಎಂ.:– ಒಂದು ಕಡೆ ಯಾವುದೂ ಇಲ್ಲ ಎಂದು ಹೇಳುತ್ತಾರೆ. ಇನ್ನೊಂದು ಕಡೆ ರಾಜಕಾಲುವೆ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ತಹಶೀಲ್ದಾರರಿಂದ ವರದಿ ಬರಬೇಕಾಗಿದೆ ಎಂದು ಹೇಳುತ್ತಾರೆ.

ಅಧ್ಯಕ್ಷರು:– ನಿಮಗೆ ಏನಾಗಬೇಕೆಂದು ಹೇಳಿ?

ಶ್ರೀ ಕೃಷ್ಣಾರೆಡ್ಡಿ ಎಂ.:– ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡು ಅದಕ್ಕೆ adjacent ಆಗಿ ಹುಲ್ಲುಬಂದಿ ಖರಾಬಿನಲ್ಲಿ 1 ಎಕರೆ 19 ಗುಂಟೆ ಜಮೀನನ್ನು ಬಡಾವಣೆಯನ್ನಾಗಿ ಮಾಡಿ ನಿವೇಶನಗಳನ್ನು ಹಂಚಿದ್ದಾರೆ. ಇದೇ ರೀತಿಯ ಹೇಳಿಕೆಗಳನ್ನು ಹೋಗುತ್ತಿದ್ದರೆ ಹೇಗೆ?

ಅಧ್ಯಕ್ಷರು:– ಇದು ಚರ್ಚೆಯ ಕಾಲವಲ್ಲ, ಇದು ಪ್ರಶ್ನೋತ್ತರದ ಕಾಲ. Is anything to say?

Dr. QUMAR UL ISLAM:- Out of 19 km storm water drain, already 3.2 km line completed. 1.2 km is in progress. 132 notices were given to those who have been encroached. ನಾನು ಖುದ್ದಾಗಿ ಹೋಗಿ ನೋಡಿ I assure this House that this work will be carried out

ಅಧ್ಯಕ್ಷರು:– ಆಯಿತು, ಸಾಕು ಬಿಡಿ. ಕೋಲಾರ ಡಿ.ಸಿ.ಯವರಿಗೆ ಸ್ವಲ್ಪ ಹೇಳಿ. ಇಲ್ಲೇ ಅಲ್ಲ, ಎಲ್ಲ ಕಡೆಯೂ ಡಿ.ಸಿ. ಗಳನ್ನು alert ಮಾಡಿ. ಅವರೂ ಸ್ವಲ್ಪ ಹಾಗೇ ಕುಳಿತಿದ್ದಾರೆ. ಮೊದಲನೇ ಪುಟದಲ್ಲಿ ಮುಖ್ಯಮಂತ್ರಿಯವರು ಆಡಳಿತ ಹೇಗೆ ಎನ್ನುವುದನ್ನು ಹೇಳಿದ್ದಾರಲ್ಲವೇ? ಈಗ ಮುಂದಿನ ಪ್ರಶ್ನೆ.

ಪ್ರಶ್ನೆ ಸಂಖ್ಯೆ 130 (2075)

(ಮಾನ್ಯ ಸದಸ್ಯರು ಶ್ರೀ ಉಮೇಶ್ ವಿಶ್ವನಾಥ ಕತ್ತಿ ಹಾಜರಿರಲಿಲ್ಲ)

ವಂಚನೆಗೊಳಗಾದ ರೈತರು

131 (931); ಶ್ರೀ ಪಾಟೀಲ್ ಜೆ.ಟಿ. (ಬೀಳಗಿ)

ಅ) 2013–14 ರಲ್ಲಿ ಯಶವಂತಪುರದಲ್ಲಿರುವ ಕೃಷಿ ಮಾರುಕಟ್ಟೆಯಲ್ಲಿ ವಂಚನೆಗೆ ಒಳಗಾದ ಬಡ ರೈತರಿಗೆ ಹಣ ಮರುಪಾವತಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ವಂಚನೆ ಮಾಡಿದ ಮಾರಾಟಗಾರರಿಂದ ಹಣ ವಸೂಲಿ ಮಾಡಿ ಬಡ ರೈತರಿಗೆ ಕೊಡುವ ವ್ಯವಸ್ಥೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

ಇ) ವಂಚನೆ ಮಾಡಿದ ಮಾರಾಟಗಾರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಕಬ್ಬು ಬೆಳೆದಂತಹ ರೈತರಿಗೆ ಕಾರ್ಖಾನೆಗಳ ಪರವಾಗಿ ಹಣ ಪಾವತಿಸಲು ಅತೀ ಶೀಘ್ರದಲ್ಲಿ ಕ್ರಮ ಕೈಗೊಂಡಿರುವಂತೆ ಈರುಳ್ಳಿ ಬೆಳೆದ ರೈತರಿಗೆ ಏಕೆ ಹಣ ಪಾವತಿಸುತ್ತಿಲ್ಲ?